6. ಗಮನ ಸೆಳೆಯುವ ಸೂಚನೆಗಳು

(ಅ) ವಿಷಯ :- ತುರುವೇಕೆರೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಮುನ್ನ ಸರ್ಕಾರದಿಂದ ಬಿಡುಗಡೆಯಾದ ಹಣದಲ್ಲಿ ನಡೆದಿರುವ ಕಾಮಗಾರಿಗಳ ಬಗ್ಗೆ.

ಶ್ರೀ ಎಂ. ಟಿ. ಕೃಷ್ಣಪ್ಪ [ತುರುವೇಕೆರೆ] :- ಮಾನ್ಯ ಅಧ್ಯಕ್ಷರೆ, ತುರುವೇಕೆರೆ ವಿಧಾನ ಸಭಾ ಕ್ಷೇತ್ರದ ಉಪ ಚುನಾವಣೆಗೆ ಮುನ್ನ ಸರ್ಕಾರದಿಂದ ಬಿಡುಗಡೆಯಾದ ಹಣ ಹಾಗೂ ಆ ಹಣದಲ್ಲಿ ಪ್ರಾರಂಭಿಸಿದ ಮತ್ತು ಪ್ರಾರಂಭಿಸದಿರುವ ಕಾಮಗಾರಿಗಳ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯುತ್ತೇನೆ.

ಕುವಾರಿ ಶೋಭಾ ಕರಂದ್ಲಾಜೆ [ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು] :- ಮಾನ್ಯ ಅಧ್ಯಕ್ಷರೆ,

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಮತ್ತು ತುರುವೇಕೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ರಸ್ತೆ, ಶೌಚಾಲಯ, ಶಾಲಾ ಕಾಲೇಜು ಕಂಪೌಂಡ್ ನಿರ್ಮಾಣ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಂಡು ಅಭಿವೃದ್ಧಿಪಡಿಸುವುದು ಅತ್ಯವಶ್ಯಕವಾಗಿದ್ದರಿಂದ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ :68/5: ಆರ್‌ಆರ್‌ಸಿ:08 ದಿನಾಂಕ : 16-08-2008 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಕಾಮಗಾರಿಗಳನ್ನು ಜಿಲ್ಲಾ ಪಂಚಾಯಿತಿಯಿಂದ ಅನುಷ್ಠಾನಗೊಳಿಸಲು ಕಾಮಗಾರಿಗಳಿಗೆ ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಡಿ ಒಟ್ಟಾರೆ ರೂ. 700.00 ಲಕ್ಷಗಳ ಅನುದಾನವನ್ನು ಈ ಕೆಳಕಂಡ ಆದೇಶಗಳಲ್ಲಿ ಬಿಡುಗಡೆಗೊಳಿಸಲಾಗಿರುತ್ತದೆ.

(ರೂ. ಲಕ್ಷಗಳಲ್ಲಿ)

ಕ್ರ ಸಂ	ಆದೇಶ ಸಂಖ್ಯೆ ದಿನಾಂಕ	ಲೆಕ್ಕ ಶೀರ್ಷಿಕೆ	ಬಿಡುಗಡೆಗೊಳಿಸಿದ ಅನುದಾನ
1.	ಗ್ರಾಅಪ:88:ಆರ್‌ಆರ್‌ಸಿ :08 ದಿನಾಂಕ : 24-11-08	3054-ರಸ್ತೆ ಮತ್ತು ಸೇತುವೆಗಳು	624.67
2.	ಗ್ರಾಅಪ:88/1ಆರ್‌ಆರ್‌ಸಿ:08 ದಿನಾಂಕ : 24-11-08	2059-ಕಟ್ಟಡಗಳು	25.50
3.	ಗ್ರಾಅಪ:88/2ಆರ್‌ಆರ್‌ಸಿ:08 ದಿನಾಂಕ : 24-11-08	2515-ಜಿ.ಪಂ. ಅಭಿವೃದ್ಧಿ	49.83
	ಒಟ್ಟು		700.00

ಸರ್ಕಾರದ ಆದೇಶದಂತೆ ಗುಬ್ಬಿ ತಾಲ್ಲೂಕು ಮತ್ತು ತುರುವೇಕೆರೆ ತಾಲ್ಲೂಕಿನ ಅನುಮೋದಿತ ಕಾಮಗಾರಿಗಳಿಗೆ ನಿಯಮಾನುಸಾರ ಅಂದಾಜು ಪಟ್ಟಿಗಳನ್ನು ತಯಾರಿಸಿ, ತಾಂತ್ರಿಕ ಪರಿಶೀಲನೆಗೆ ಒಳಪಡಿಸಿ ಸೂಕ್ತ ಪ್ರಾಧಿಕಾರದಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಈ ಕಾಮಗಾರಿಗಳಿಗೆ ಮೇಲ್ಕಂಡ ಆದೇಶ ಗಳಂತೆ ಬಿಡುಗಡೆಯಾದ ಅನುದಾನವು ಕಾಮಗಾರಿಗಳ ಪ್ರಗತಿಗನುಗುಣವಾಗಿ ಬಳಕೆಯಾಗಬೇಕಾಗಿದ್ದು, ಅದರಂತೆ ಜಿಲ್ಲಾ ಪಂಚಾಯಿತಿಯು ಕ್ರಮ ವಹಿಸುವುದು.

ಮಾನ್ಯ ಅಧ್ಯಕ್ಷರೆ, ದಿನಾಂಕ 18-08-2008ರಲ್ಲಿ ಮೊದಲ ಬಾರಿಯ ಆಡಳಿತಾತ್ಮಕ ಅನುಮೋದನೆಯನ್ನು 114 ಕಾಮಗಾರಿಗಳಿಗೆ ನೀಡಲಾಯಿತು. ಆಮೇಲೆ ಮತ್ತೆ ಇದು ಪರಿಷ್ಕರಣೆಯಾಗಬೇಕೆಂದು ಮನವಿ ಬಂದ ಕಾರಣ, ದಿನಾಂಕ 22-09-2008 ರಲ್ಲಿ ಮತ್ತೊಂದು ಬಾರಿ 337 ಕಾಮಗಾರಿಗಳ ಪರಿಷ್ಕೃತ ಪಟ್ಟಿಗೆ ಒಪ್ಪಿಗೆ ಅನುಮೋದನೆಯನ್ನು ನೀಡಲಾಯಿತು. ಈ ಕಾರಣಕ್ಕೆ ಇದು ಆದ ತಕ್ಷಣ ಅಲ್ಲಿ ಉಪ ಚುನಾವಣೆ ಘೋಷಣೆಯಾಯಿತು. ಉಪಚುನಾವಣೆಯಾದ ಸಂದರ್ಭದಲ್ಲಿ ಕಾಮಗಾರಿಗಳನ್ನು ನಡೆಸಲಿಕ್ಕೆ ಮತ್ತೆ ತೊಂದರೆಯಾಯಿತು. ಆ ಕಾರಣಕ್ಕಾಗಿ ಇವತ್ತು ಜಿಲ್ಲಾ ಪಂಚಾಯತ್‌ಗೆ ಹಣ ಬಿಡುಗಡೆಯಾಗಿದೆ. ಶೀಘ್ರವಾಗಿ ಅಲ್ಲಿಂದ ಯಾವುದೇ ರೀತಿಯ estimate ಆಗಲಿ ಅಥವಾ ಯಾವುದಾಗಲಿ ನಮಗೆ ಪೂರ್ಣ ಪ್ರಮಾಣದಲ್ಲಿ ಇನ್ನೂ ಬಂದಿಲ್ಲ. ಈ ಪರಿಷ್ಕೃತ ಅಂದಾಜಿನ 337

ಕಾಮಗಾರಿಗಳ ಪಟ್ಟಿ ಬಂದ ತಕ್ಷಣ, estimate readyಯಾದ ತಕ್ಷಣ, ಈ ಹಣವನ್ನು ಬಿಡುಗಡೆ ಮಾಡಲಾಗುವುದೆಂದು ತಮ್ಮ ಮೂಲಕ ನಾನು ತಿಳಿಸಬಯಸುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿದಂತೆ 337 ಕಾಮಗಾರಿಗಳಿವೆ, ಇದು ಸರಿಯಾಗಿದೆ. ಒಂದನ್ನು ಮೊದಲು ಮಾಡಿದರು, ಸರಿ ಹೋಗಲಿಲ್ಲ. ಚುನಾವಣೆ announce ಮಾಡುವುದಕ್ಕೆ ಮುಂಚೆ ಮತ್ತೆ modify ಮಾಡಿದರು. ಇದು ಹೇಗಿದೆ ಎಂದರೆ, 337 ಕಾಮಗಾರಿಗಳ ಪಟ್ಟಿ ಇದೆ, ಅದನ್ನು ಅವರೇ ಮಾಡಿದ್ದಾರೆ. ಇವರು ಮಾಡಿದ್ದಲ್ಲ, ಅಲ್ಲಿಯ ಸ್ಥಳೀಯರ ಸಲಹೆ ಮೇರೆಗೆ ಮಾಡಿದ್ದಾರೆ. ಹೊರಮಾವನಹಳ್ಳಿ ಒಕ್ಕಲಿಗರ ಬೀದಿ ರಸ್ತೆ 50 ಸಾವಿರ ರೂ.ಗಳು,... ಹೀಗೆ ಪ್ರತಿಯೊಂದು ಕಾಮಗಾರಿಗೆ 25 ಸಾವಿರ, 50 ಸಾವಿರ ಅಥವಾ 75 ಸಾವಿರ ರೂ.ಗಳೆಂದು ನಿಗದಿ ಮಾಡಿದ್ದಾರೆ. ಅದನ್ನು ನಾನೇನು ಬದಲಾವಣೆ ಮಾಡಿ ಎಂದು ಕೇಳುವುದಿಲ್ಲ, ಅಲ್ಲಿಗೇ ಕಾಮಗಾರಿಗಳನ್ನು ಮಾಡಿಸಲಿ. ಈ ಕೆಲಸಗಳನ್ನು ಯಾವಾಗ ಅನುಷ್ಠಾನಗೊಳಿಸುತ್ತೀರಿ? ಮಾರ್ಚ್ 31ರೊಳಗೆ ಅದು ಮುಗಿಯಬೇಕಾಗಿದೆ. Estimate ಎಲ್ಲಾ ಮಾಡಿ, ಅದು ಜಿಲ್ಲಾ ಪಂಚಾಯತ್‌ಗೆ ಹೋಗಿ ಕುಳಿತಿದೆ. ತಾವು ಯಾವಾಗ ಅದನ್ನು ಅನುಷ್ಠಾನ ಮಾಡುತ್ತೀರಿ? ಎಂಬುದು ನನಗೆ ಬೇಕಾಗಿದೆ. ಅದೇ ರೀತಿ ಮದ್ದೂರಿಗೆ ಕಾಮಗಾರಿಗಳನ್ನು ಘೋಷಣೆ ಮಾಡಿದ್ದರು. ಸನ್ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಯವರು ಆದೇಶವೊಂದನ್ನು ಮಾಡಿದ್ದಾರೆ...

ಅಧ್ಯಕ್ಷರು :- ಮಾನ್ಯ ಕೃಷ್ಣಪ್ಪನವರೆ, ಕೇವಲ ತುರುವೇಕೆರೆಗೆ ಸಂಬಂಧಪಟ್ಟಂತೆ ಮಾತ್ರ ಕೇಳಿ.

ಶ್ರೀ ಎಂ.ಟಿ. ಕೃಷ್ಣಪ್ಪ :- ಆಯಿತು ಬಿಡಿ. ಅದೂ ಅದೇ ಅಲ್ವೇ?

ಅಧ್ಯಕ್ಷರು :- ತಾವು ತುರುವೇಕೆರೆ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಗಮನ ಸೆಳೆಯುವ ಸೂಚನೆ ಮಂಡಿಸಿದ್ದೀರಿ. ಆದ್ದರಿಂದ ತಾವು ಆ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ specific ಆಗಿ ಏನಾದರೂ ಇದ್ದರೆ, ಅದನ್ನು ಮಾತ್ರ ಕೇಳಿ. ಮದ್ದೂರಿಗೆ ಸಂಬಂಧಪಟ್ಟಿದ್ದನ್ನು ಏಕೆ ಕೇಳುತ್ತೀರಿ? ಎಲ್ಲರೂ ಎಲ್ಲಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೇಳಲಿಕ್ಕೆ ಹೊರಟರೆ, there is no end at all. ನೀವು ತುರುವೇಕೆರೆಯದ್ದು ಮಾತ್ರ ಕೇಳಿ.

ಶ್ರೀ ಆರ್. ಧ್ರುವನಾರಾಯಣ್ :- ಮಾನ್ಯ ಅಧ್ಯಕ್ಷರೆ, ಒಂದೇ ಕ್ಷೇತ್ರಕ್ಕೆ 7 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರಲ್ಲಾ, ಅದರ ಬಗ್ಗೆ ಅವರು ಕೇಳುತ್ತಿದ್ದಾರೆ. ಡಾ॥ ನಂಜುಂಡಪ್ಪ ವರದಿ ಪ್ರಕಾರ ಅತ್ಯಂತ ಹಿಂದುಳಿದ...

[ಗೊಂದಲ]

ಅಧ್ಯಕ್ಷರು :- ಮಾನ್ಯ ಧ್ರುವನಾರಾಯಣ್‌ರವರೆ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದಾಗ ಅದನ್ನೆಲ್ಲಾ ಕೇಳಿ. ಅವರಿಗೆ ಏಕೆ ಅಷ್ಟು ಕೋಟಿ ಕೊಟ್ಟಿದ್ದೀರಿ? ನಮಗೆ ಏಕೆ ಕೊಟ್ಟಿಲ್ಲ ಎಂದು ಸರ್ಕಾರವನ್ನು ಆಗ ಕೇಳಿ. ಗಮನ ಸೆಳೆಯುವ ಸೂಚನೆಯ ಮೇಲಿನ ಚರ್ಚೆ ಸಂದರ್ಭದಲ್ಲಿ ಅದೆಲ್ಲವನ್ನೂ ಕೇಳವುದು ಸರಿಯಲ್ಲ.

[ಗೊಂದಲ]

ಶ್ರೀ ಬಿ. ರಮಾನಾಥ ರೈ :- ಮಾನ್ಯ ಮುಖ್ಯಮಂತ್ರಿಯವರು ಪ್ರತಿ ಸಲ ಕೇಂದ್ರ ಸರ್ಕಾರ ರಾಜ್ಯದ ವಿರುದ್ಧ ಮಲತಾಯಿ ಧೋರಣೆ ತೋರಿಸುತ್ತಿದೆ ಎಂದು ಹೇಳುತ್ತಾರೆ. ಆದರೆ ಇಲ್ಲಿ ನಮ್ಮ ಬಗ್ಗೆ ತೋರಿರುವ ಮಲತಾಯಿ ಧೋರಣೆಯನ್ನು ನಾವು ಕೇಳಬೇಡವೇ?

[ಗೊಂದಲ]

ಅಧ್ಯಕ್ಷರು :- ಮಾನ್ಯ ರಮಾನಾಥ ರೈರವರೆ, ದಯವಿಟ್ಟು ಈಗ intervene ಆಗಬೇಡಿ. ಈಗ ಅದರ ಬಗ್ಗೆ ಮಾತನಾಡಬೇಡಿ. ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಇದನ್ನು ಕೇಳಿ.

[ಗೊಂದಲ]

ಮಾನ್ಯ ಬಾಲಕೃಷ್ಣರವರೆ, ಈಗ ಬೇಡ. ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ನೀವೇ ಪ್ರಾರಂಭ ಮಾಡುವಿರಂತೆ. ಆಗ ಇದನ್ನು ಕೇಳಿ.

[ಗೊಂದಲ]

ಮಾನ್ಯ ರೇವಣ್ಣನವರೆ, ಇದು ಗಮನ ಸೆಳೆಯುವ ಸೂಚನೆಯಾಗಿದೆ. ಅದು ತುರುವೇಕೆರೆ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಮಾತ್ರ ಇದೆ. ಬೇರೆ ವಿಷಯ ಪ್ರಸ್ತಾಪಿಸಿದರೆ, ಸುಮ್ಮನೆ ಅದು ವಿಷಯಾಂತರ ಆಗುತ್ತದೆ. ಹೀಗಾದರೆ, ಉಳಿದ ಇತರ ವಿಷಯಗಳ

ಬಗ್ಗೆ ಇಲ್ಲಿ ಚರ್ಚೆ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಬೇರೆ ಕ್ಷೇತ್ರದ ವಿಷಯ ಈಗ ಬೇಡ. ಮಾನ್ಯ ಕೃಷ್ಣಪ್ಪನವರೆ, ದಯವಿಟ್ಟು ತುರುವೇಕೆರೆ ಕ್ಷೇತ್ರದ್ದು ಮಾತ್ರ ಕೇಳಿ.

[ಗೊಂದಲ]

ಶ್ರೀ ಎಂ.ಟಿ. ಕೃಷ್ಣಪ್ಪ :- ಮಾನ್ಯ ಅಧ್ಯಕ್ಷರೆ, 337 ಕಾಮಗಾರಿಗಳನ್ನೇನು ಮಾಡುತ್ತಿದ್ದಾರೆ, ಅದರಲ್ಲಿ ನಾನು ಬದಲಾವಣೆಯನ್ನೇನೂ ಕೇಳುತ್ತಿಲ್ಲ. ಇದನ್ನು ಯಾವಾಗ ಶುರು ಮಾಡುತ್ತೀರಿ? ಮಾರ್ಚ್ 31ಕ್ಕೆ ಹಣ ಮುಗಿದು ಹೋಗುತ್ತದೆ. ಈ ಕೆಲಸವನ್ನು ಯಾವಾಗ ಶುರು ಮಾಡುತ್ತೀರಿ ಎಂದು ದಯಮಾಡಿ ದಿನಾಂಕ ಹೇಳಿ. ನನಗೊಂದು message ಏನಿದೆ ಎಂದರೆ, ಅಲ್ಲಿನ executive engineerರವರು ಹೇಳುತ್ತಾರೆ..... 'ಕನ್ನಡ ಪ್ರಭ'ದಲ್ಲಿ ಒಂದು article ಬಂದಿದೆ. ಅದು ಎಷ್ಟು ಸತ್ಯ ಅಥವಾ ಅಸತ್ಯ ಎನ್ನುವುದರ ಬಗ್ಗೆ ನಾನು comment ಮಾಡಬಯಸುವುದಿಲ್ಲ. 'ಉಪ ಚುನಾವಣೆ : ಜೆ.ಡಿ. [ಎಸ್] ಗೆದ್ದಲ್ಲಿ ಪ್ಯಾಕೇಜ್ ಇಲ್ಲ' ಎಂದು ಕನ್ನಡಪ್ರಭದ ಮುಖಪುಟದಲ್ಲಿ ವರದಿಯಾಗಿದೆ. ನಮ್ಮ ಕ್ಷೇತ್ರಕ್ಕೆ ಇದು ಏನಾದರೂ apply ಆಗುತ್ತದೆಯೇ? ಎಂಬುದು ನನ್ನ ಪ್ರಶ್ನೆಯಾಗಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ಇಲ್ಲೂ ಇದೇ ಪ್ರಶ್ನೆಯಾಗಿದೆ. ಮದ್ದೂರಿನಲ್ಲೂ ಕಾಮಗಾರಿಗಳಿಗೆ ಮಾನ್ಯ ಮುಖ್ಯಮಂತ್ರಿಗಳು ತಡೆಯಾಜ್ಞೆ ನೀಡಿದ್ದಾರೆ. ಅಲ್ಲಿ ಉಪ ಚುನಾವಣೆಗೆ ಮುಂಚೆ special package ಅನ್ನು ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದರು. ಅವರ ಪಕ್ಷದವರು ಅಲ್ಲಿ ಗೆಲ್ಲಲಿಲ್ಲವೆಂದು ಘೋಷಣೆ ಮಾಡಿದ ಪ್ಯಾಕೇಜ್ ಜಾರಿಗೆ ತಡೆಯಾಜ್ಞೆ ನೀಡುವುದು ಸರಿಯೇ? ದಯಮಾಡಿ ಇದು ಜಾರಿ ಆಗಬೇಕು. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ಉತ್ತರ ಕೊಡಬೇಕು. ವಿಶೇಷ ಪ್ಯಾಕೇಜ್ ಅನ್ನು ಮಾನ್ಯ ಮುಖ್ಯಮಂತ್ರಿಗಳೇ ಘೋಷಣೆ ಮಾಡಿದ್ದರು. ಅವರ ಸೂಚನೆ ಮೇರೆಗೆ ಮದ್ದೂರು ಕ್ಷೇತ್ರದಲ್ಲಿ ಕಾಮಗಾರಿಗಳ ಅನುಷ್ಠಾನಕ್ಕೆ ತಡೆಹಿಡಿಯಲಾಗಿದೆ. ದಯಮಾಡಿ ಮಾನ್ಯ ಅಧ್ಯಕ್ಷರು ನಮ್ಮ ನೆರವಿಗೆ ಬರಬೇಕು.

ಅಧ್ಯಕ್ಷರು :- ಮಾನ್ಯ ಬಾಲಕೃಷ್ಣರವರೆ, ಮದ್ದೂರು ಕ್ಷೇತ್ರದ ಪ್ರಸ್ತಾಪ ಈಗ ಬೇಡ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷತೆ, ಆ ಕ್ಷೇತ್ರದ ನಮ್ಮ ಹೊಸ ಶಾಸಕರು ಸದನದಲ್ಲಿಲ್ಲ. ದಯಮಾಡಿ ನೀವು ನಮ್ಮ ನೆರವಿಗೆ ಬರಬೇಕು.

[ಗೊಂದಲ]

ಅಧ್ಯಕ್ಷರು :- ಒಂದು ನಿಮಿಷ. ತುರುವೇಕೆರೆ ಕ್ಷೇತ್ರದ್ದು ಏನಾದರೂ ತಡೆಹಿಡಿದಿದ್ದಾರೆಯೇ?

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮದ್ದೂರಿನಲ್ಲಿ ತಡೆಹಿಡಿದಿದ್ದಾರೆ.

ಶ್ರೀ ಎಂ.ಟಿ. ಕೃಷ್ಣಪ್ಪ :- ತುರುವೇಕೆರೆಯಲ್ಲಿ ತಡೆಹಿಡಿದಿರುವ ಆದೇಶ ನಮಗೆ ಬಂದಿಲ್ಲ. ಪೇಪರ್‌ನಲ್ಲಿ ಮಾತ್ರ ಹೇಳಿದ್ದಾರೆ. ಆದರೆ ಮದ್ದೂರಿನಲ್ಲಿ ತಡೆಹಿಡಿದಿರುವ ಬಗ್ಗೆ ನಮ್ಮ ಹತ್ತಿರ ಆದೇಶವಿದೆ. ಅದು ಬೇರೆ ವಿಚಾರ. ತುರುವೇಕೆರೆಗೆ ಸಂಬಂಧಪಟ್ಟಂತೆ ತಡೆಹಿಡಿದಿರುವ ವಿಚಾರದ ಬಗ್ಗೆ ನಮಗೆ ತಿಳಿದಿಲ್ಲ.

[ಗೊಂದಲ]

ಅಧ್ಯಕ್ಷರು :- ಮಾನ್ಯ ಸಚಿವರೆ, ಮದ್ದೂರು ವಿಚಾರವನ್ನೂ ಕೂಡ ಸೇರಿಸಿ ಉತ್ತರ ಹೇಳಿಬಿಡಿ.

ಶ್ರೀ ಎಂ.ಟಿ. ಕೃಷ್ಣಪ್ಪ :- ನಮ್ಮ ಕ್ಷೇತ್ರದ ಜೊತೆಗೆ ಮದ್ದೂರು ಮತ್ತು ಮಧುಗಿರಿಯದನ್ನೂ ಸೇರಿಸಿ ಉತ್ತರ ಹೇಳಿಬಿಡಲಿ.

[ಗೊಂದಲ]

ಶ್ರೀ ಬಿ. ರಮಾನಾಥ ರೈ :- ನಾವು ಮಾಡಿರುವ ತಪ್ಪಾದರೂ ಏನು?

[ಗೊಂದಲ]

ಅಧ್ಯಕ್ಷರು :- ಮಾನ್ಯ ರಮಾನಾಥ ರೈರವರೆ, ದಯಮಾಡಿ ಕುಳಿತುಕೊಳ್ಳಿ. ಅದು ಬೇರೆ ವಿಚಾರ. ನಿಮ್ಮ ವಿರೋಧ ಪಕ್ಷದ ನಾಯಕರು ಅದೆಲ್ಲದರ ಬಗ್ಗೆ ಕೇಳುತ್ತಾರೆ.

[ಗೊಂದಲ]

ಶ್ರೀ ಆರ್. ಧ್ರುವನಾರಾಯಣ್ :- 39 ತಾಲ್ಲೂಕುಗಳಲ್ಲಿ ಡಾ॥ ನಂಜುಂಡಪ್ಪ ವರದಿಯ ಪ್ರಕಾರ ...

[ಗೊಂದಲ]

ಅಧ್ಯಕ್ಷರು :- ಇದನ್ನು ಗಮನ ಸೆಳೆಯುವ ಸೂಚನೆ ಅಡಿಯಲ್ಲಿ ಪ್ರಸ್ತಾಪಿಸಬೇಡಿ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ನಮಗೆ ಏಕೆ ಅಷ್ಟು ಕೊಟ್ಟಿರಿ? ಅವರಿಗೆ ಏಕೆ ಅಷ್ಟೊಂದು ಕೊಟ್ಟಿರಿ ಎಂದು ಬೇಕಾದರೆ ಕೇಳಿ. ಈಗ ಬೇಡ.

ಶ್ರೀ ಆರ್.ಧ್ರುವನಾರಾಯಣ್ :- ಹಣ ಹಂಚಿಕೆ ಮಾಡಲು ಯಾವ ಮಾನದಂಡ ಅನುಸರಿಸಿದ್ದಾರೆ?

ಅಧ್ಯಕ್ಷರು :- ಅದೆಲ್ಲವನ್ನೂ ಸಹ ಆಗಲೇ ಕೇಳಿ. ಈಗ ಬೇಡ.

[ಗೊಂದಲ]

ಶ್ರೀ ಎಂ.ಟಿ. ಕೃಷ್ಣಪ್ಪ :- ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆ ಎಂದರೆ, ಪೇಪರ್‌ನಲ್ಲಿ ಮಾತ್ರ ತಡೆಹಿಡಿದಿದ್ದಾರೆ ಎಂದು ಬಂದಿದೆ. ಆದರೆ ಅದರ ಬಗ್ಗೆ practical ಆಗಿ ನನಗೆ ಯಾವ ಆದೇಶವೂ ಬಂದಿಲ್ಲ. ಒಂದೊಂದು ಕ್ಷೇತ್ರಕ್ಕೆ ಒಂದೊಂದು ರೀತಿ ಮಾಡುವಂತಹ ವ್ಯವಸ್ಥೆ ಇಟ್ಟುಕೊಳ್ಳಬಾರದು. ಏತಕ್ಕಾಗಿ ಇದನ್ನು ಕೇಳುತ್ತಿದ್ದೇನೆ ಎಂದರೆ, ಚುನಾವಣೆಗೆ ಮುನ್ನ ... ಇದನ್ನು ನಾವೇನೂ ಕೇಳಿರಲಿಲ್ಲ. ದುಡ್ಡು ಕೊಡಿ ಎಂದು ನಾವ್ಯಾರೂ ಕೂಡ ಅರ್ಜಿ ಹಾಕಿರಲಿಲ್ಲ, ಲೆಟರ್ ಕೊಟ್ಟಿರಲಿಲ್ಲ. ಉಪ ಚುನಾವಣೆಗೆ ಪೂರ್ವದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಚುನಾವನೆಗೆ ಗೆಲ್ಲಬೇಕೆಂಬ ದೃಷ್ಟಿಯಿಂದ ಎಲ್ಲಾ ಕಡೆ ಪ್ಯಾಕೇಜ್ ಘೋಷಿಸಿದ್ದರು. ನಾನು ಅದನ್ನು ಸ್ವಾಗತಿಸುತ್ತೇನೆ. ಏಕೆಂದರೆ, ನಮ್ಮ ತಾಲ್ಲೂಕಿಗೆ ಯಾರೇ ಬಂದರೂ, ಅದು develop ಆದರೆ ಸಾಕು. ಅವರು, ಇವರು ಎಂಬ ವಿಚಾರ ಏನೂ ಇಲ್ಲಿಲ್ಲ. ನಮಗೇನು ಅನ್ಯಾಯವಾಗಿದೆ ಎಂದರೆ, Executive Engineer ಅವರನ್ನು ಕೇಳಿದರೆ, 'ಕಾಮಗಾರಿಗಳನ್ನು ಅನುಷ್ಠಾನಗೊಳಿಸಬಾರದು ಎಂದು oral instructions ಬಂದಿದೆ' ಎಂದು ಹೇಳುತ್ತಾರೆ. ಈ ಬಗ್ಗೆ PWDಯವರನ್ನು ಕೇಳಿದರೆ, 'ಟೆಂಡರ್ ಆಗಿದೆ, agreement ಆಗಿದೆ, ಮಾಡಬೇಡಿ' ಎಂದು ಹೇಳಿದ್ದಾರೆ ಎನ್ನುತ್ತಾರೆ. ಆ ಪುಣ್ಯಾತ್ಮ ಬಹಳ ಹಿಂಸೆ ಮನುಷ್ಯ. PWDಯ executive engineer ಮಹಾನ್ fraud ಆಗಿದ್ದಾನೆ. ಮೊದಲು LOC ಕೊಡಬೇಕಾದರೆ 2-3% ತೆಗೆದುಕೊಳ್ಳುತ್ತಿದ್ದರು. ಈಗ 10% ಇಲ್ಲದೆ ಮುಟ್ಟುವುದೇ ಇಲ್ಲ. ಯಾಕಪ್ಪ ದೊರೆ ಎಂದರೆ, 'ನಾನು ಇಲ್ಲಿಗೆ 50 ಲಕ್ಷ ರೂ. ಗಳನ್ನು ಕೊಟ್ಟು ವರ್ಗಾವಣೆ ಮಾಡಿಸಿಕೊಂಡು ಬಂದಿದ್ದೇನೆ' ಎನ್ನುತ್ತಾನೆ. ಹೀಗಾಗಿ ಜಿಲ್ಲಾ ಮಟ್ಟದ ...

[ಗೊಂದಲ]

ದಯಮಾಡಿ ಕುಳಿತುಕೊಳ್ಳಿ. ನಾನು ಯಾವ ರಾಜಕಾರಣಿ ಬಗ್ಗೆಯೂ ಮಾತನಾಡುತ್ತಿಲ್ಲ. ನೀವು ಬೇಕಾದರೆ ನನ್ನ ನಂತರ ಮಾತನಾಡಿ. ನಾನು ಯಾವ ರಾಜಕಾರಣಿ ಅಥವಾ ರಾಜಕೀಯ ಮುಖಂಡರ ಬಗ್ಗೆ ಆಪಾದನೆ ಮಾಡುತ್ತಿಲ್ಲ. ಅಧಿಕಾರಿಗಳ ಬಗ್ಗೆ ಮಾತ್ರ ಆಪಾದನೆ ಮಾಡುತ್ತಿದ್ದೇನೆ.

[ಗೊಂದಲ]

ಅಧ್ಯಕ್ಷರು :- ಮಾನ್ಯ ಕೃಷ್ಣಪ್ಪನವರೆ, ರಾಜಕಾರಣಿಯೇ ಆಗಲಿ ಅಥವಾ ಯಾರೇ ಆಗಲಿ, ಯಾರ ಮೇಲಾದರೂ ತಾವು ಆಪಾದನೆ ಮಾಡಬೇಕಾದರೆ, specific ಆಗಿ ಏನಾದರೂ ಅದರ ಬಗ್ಗೆ ನಿಮ್ಮಲ್ಲಿ ಮಾಹಿತಿ ಇದ್ದರೆ, ಅದನ್ನು ನನಗೆ ಕಳುಹಿಸಿಕೊಡಿ. ಈ ರೀತಿ vague ಆಗಿ ಆಪಾದನೆ ಮಾಡುವುದು ಸರಿಯಲ್ಲ.

[ಗೊಂದಲ]

ಒಬ್ಬ Executive Engineer ಬಗ್ಗೆ ತಾವು ಹೇಳಿದಿರಿ. ನೀವು specific ಆಗಿ allegation ಮಾಡುವುದಾದರೆ, ಅದರ ಬಗ್ಗೆ ನನಗೆ ಮೊದಲೇ ಮಾಹಿತಿ ಕೊಟ್ಟು, ಈ ಬಗ್ಗೆ ಪ್ರಸ್ತಾಪಿಸುತ್ತೇನೆಂದು ನೋಟಿಸ್ ಕೊಡಿ. ಆಗ ನಾನು ನಿಮಗೆ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ :- ಮಾನ್ಯ ಅಧ್ಯಕ್ಷರೆ, ನೀವು ಇಲ್ಲೂ ಕುಳಿತಿದ್ದೀರಿ, ಅಲ್ಲೂ ಕುಳಿತಿದ್ದೀರಿ.

ಅಧ್ಯಕ್ಷರು :- ನಾನು ಇಲ್ಲಿ ಕುಳಿತಿದ್ದಾಗ, ಪ್ರತಿಪಕ್ಷದ ನಾಯಕನಾಗಿ ಈ ರೀತಿ allegation ಯಾರ ಮೇಲೂ ಮಾಡಿರಲಿಲ್ಲ. ಮಾಹಿತಿ ಇದ್ದಾಗ ಮಾತ್ರವೇ ನಾನು allegation ಮಾಡಿದ್ದೇನೆ. ನಿಮ್ಮ ಕ್ಷೇತ್ರದ ವಿಷಯ ನೀವು ಮಾತನಾಡಿ.

[ಗೊಂದಲ]

ಶ್ರೀ ಎಂ.ಟಿ. ಕೃಷ್ಣಪ್ಪ :- ಮಾನ್ಯ ಅಧ್ಯಕ್ಷರೆ, ನಾವು ನಮ್ಮ ಕಷ್ಟವನ್ನು ನಿಮ್ಮ ಮುಂದೆ ಹೇಳಿಕೊಳ್ಳುತ್ತಿದ್ದೇವೆ. ದಯಮಾಡಿ ತಾವು ಅದನ್ನು ಅರ್ಥ ಮಾಡಿಕೊಳ್ಳಿ.

[ಗೊಂದಲ]

ಶ್ರೀ ಸುರೇಶ್ ಗೌಡ :- ಅಧ್ಯಕ್ಷರಿಗೆ ಅಲ್ಲಿ ಕುಳಿತಿದ್ದೀರಿ, ಅಲ್ಲಿ ಕುಳಿತಿದ್ದೀರಿ ಎಂದು ಹೇಳಿದ್ದೀರಿ. ನೀವು ಅಧ್ಯಕ್ಷರ ಕ್ಷಮೆ ಕೇಳಬೇಕು.

[ಗೊಂದಲ]

ಅಧ್ಯಕ್ಷರು :- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

[ಗೊಂದಲ]

ಮಾನ್ಯ ಕೃಷ್ಣಪ್ಪನವರೆ, ನೀವು ಮಾತನಾಡಬೇಕಾದರೆ ನಾಲಿಗೆ ಬಿಗಿ ಹಿಡಿದು ಮಾತನಾಡಿ, ಸರಿಯಾಗಿ ಮಾತನಾಡಿ.

[ಗೊಂದಲ]

ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಒಬ್ಬೊಬ್ಬರಾಗಿ ಮಾತನಾಡಿ.

[ಗೊಂದಲ]

ಶ್ರೀ ಬಂಡೆಪ್ಪ ಕಾಶಂಪೂರ :- ಮಾನ್ಯ ಅಧ್ಯಕ್ಷರೆ, ನಾವು ಇಲ್ಲಿ ಮೂರು ದಿವಸದಿಂದ ಕುಳಿತಿದ್ದೇವೆ...

[ಗೊಂದಲ]

ಅಧ್ಯಕ್ಷರು :- ಕೇವಲ ಗಮನ ಸೆಳೆಯುವ ಸೂಚನೆ ವಿಷಯದ ಮೇಲಷ್ಟೇ ಮಾತನಾಡಿದ್ದರೆ, ಇದು ಮುಗಿದು ಹೋಗುತ್ತಿತ್ತು. ಬೇರೆ ವಿಷಯ ಮಾತನಾಡಿದ್ದರಿಂದ ಇದು ಹೀಗಾಯಿತು.

[ಗೊಂದಲ]

ಶ್ರೀ ಎಂ.ಟಿ. ಕೃಷ್ಣಪ್ಪ :- ನನ್ನ ಮೇಲೆ ಆ ಅಧಿಕಾರಿ ಬೇಕಾದರೆ privilege motion move ಮಾಡಲಿ ಇಲ್ಲವೇ deformation case ಹಾಕಲಿ. ಅದನ್ನು ನಾನು ಎದುರಿಸುತ್ತೇನೆ. ಅದಕ್ಕೇನು ತಾಪತ್ರಯವಿಲ್ಲ. ಇಡೀ ಜಿಲ್ಲೆಯ ಜನ ಹಾಗೆ ಹೇಳುತ್ತಾರೆ. ಈ ಸಮಸ್ಯೆಯನ್ನು ನಾನು ರೈಟಿಂಗ್‌ನಲ್ಲಿ ಬರೆದು ಕೊಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು :- ಹಾಗಾದರೆ ಅದನ್ನು ಬಿಟ್ಟುಬಿಡಿ. ನಿಮಗೆ ಪ್ರಸ್ತಾಪಿಸಬೇಕೆಂದಿದ್ದರೆ, ಆ ಬಗ್ಗೆ ಮೊದಲೇ ಬರೆದುಕೊಡಿ. ಆ ವಿಷಯ ಬಿಟ್ಟು ಬೇರೆಯದನ್ನು ಪ್ರಸ್ತಾಪ ಮಾಡಿ.

[ಗೊಂದಲ]

ಶ್ರೀ ಎಂ.ಟಿ.ಕೃಷ್ಣಪ್ಪ :- 337 ಕಾಮಗಾರಿಗಳನ್ನು ಯಾವಾಗ ಶುರು ಮಾಡುತ್ತಾರೆಂದು ಮಾನ್ಯ ಅಧ್ಯಕ್ಷರ ಮೂಲಕ ಸಚಿವರನ್ನು ಕೇಳುತ್ತಿದ್ದೇನೆ. ಇದಕ್ಕೆ ಮಾನ್ಯ ಅಧ್ಯಕ್ಷರು ಏಕೆ ಸಿಟ್ಟು ಮಾಡಿಕೊಳ್ಳುತ್ತಾರೋ ಗೊತ್ತಿಲ್ಲ.

[ಗೊಂದಲ]

ಅಧ್ಯಕ್ಷರು :- ನೀವು ಈ ರೀತಿ ಮಾಡಿದರೆ ಹೇಗೆ?

ಅಧ್ಯಕ್ಷರು :- ಮಾನ್ಯ ಸಚಿವರು ಉತ್ತರವನ್ನು ಕೊಡಲಿ, ಸುರೇಶ್ ಗೌಡರೆ, ಕುಳಿತುಕೊಳ್ಳಿ, ಯಾವ ವಿಷಯವನ್ನು ಹೇಳುತ್ತಿದ್ದೀರಿ?

[ಗೊಂದಲ]

ಶ್ರೀ ಬಿ. ಸುರೇಶ್ ಗೌಡ :- ಒಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರ್ 50 ಲಕ್ಷ ರೂಪಾಯಿಗಳನ್ನು ಕೊಟ್ಟು ಆ ಸ್ಥಳಕ್ಕೆ ಬಂದಿದ್ದಾನೆಂದು ಮಾನ್ಯ ಸದಸ್ಯರು ಹೇಳಿದರು, ಅದನ್ನು ಸ್ಪಷ್ಟೀಕರಿಸಬೇಕೆಂದು ಕೇಳುತ್ತಿದ್ದೇನೆ.

[ಗೊಂದಲ]

ಅಧ್ಯಕ್ಷರು :- ಅದನ್ನು ಅಲ್ಲಿಗೆ ಮುಗಿಸಿ.

ಶ್ರೀ ಎಂ.ಟಿ. ಕೃಷ್ಣಪ್ಪ :- ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿಕೊಂಡು ನೋಡಬೇಕಾ?

[ಗೊಂದಲ]

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:- ಈ ಸರ್ಕಾರದಲ್ಲಿ ಎಷ್ಟು ಭ್ರಷ್ಟಾಚಾರವಿದೆ ಎಂಬುದನ್ನು ತೋರಿಸುತ್ತದೆ, ಒಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರ್ ಇಷ್ಟೆಲ್ಲ ಮಾತನಾಡುತ್ತಾನೆ ಎಂದರೆ,...

[ಗೊಂದಲ]

ಶ್ರೀ ಎಂ.ಟಿ. ಕೃಷ್ಣಪ್ಪ :- ನಾನು ಸುರೇಶ್ ಗೌಡರ ಮೇಲೆ ಅಪಾದನೆ ಮಾಡುತ್ತಿಲ್ಲ, ಅವರು ಅಷ್ಟಕ್ಕೆ ಏತಕ್ಕೆ ಸಿಟ್ಟು ಮಾಡಿಕೊಳ್ಳಬೇಕು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಅಧ್ಯಕ್ಷರೆ, ಹಿಂದೆ, ಇಂಥ ವಿಷಯ ಗಳಲ್ಲಿ ಈ ಕಡೆ ಕುಳಿತಾಗ ಯಾವ ರೀತಿ ಅಪಾದನೆಗಳನ್ನು ಮಾಡಿ, ಲಂಚ ಕೊಟ್ಟವನ ಸಾಕ್ಷಿ ಕೊಡು ಎಂದರೆ ನಾನೆಲ್ಲಿ ತೆಗೆದುಕೊಂಡು ಬರಲೆಂದು, ಈ ಭಾಗದಲ್ಲಿ ಕುಳಿತು ಚರ್ಚೆ ಮಾಡುವಾಗ ಉತ್ತರ ಕೊಟ್ಟಿರುವ ಹಲವಾರು ಉದಾಹರಣೆಗಳು ಕಡತಗಳಲ್ಲಿವೆ. ವಿರೋಧಪಕ್ಷದಲ್ಲಿ ಕುಳಿತು ಮುಖ್ಯಮಂತ್ರಿಗಳು ಕೆಲಸ ಮಾಡುವಾಗ ಈ ರೀತಿ ಅಪಾದನೆಗಳನ್ನು ಮಾಡಿದಾಗ ಕೊಟ್ಟಂತ ಅಧಿಕಾರಿ ಯಾವ ಧೈರ್ಯದ ಮೇಲೆ ಸಾಕ್ಷಿ ಹೇಳುತ್ತೇನೆಂದು ಬರುತ್ತಾನೆ. ಈಗ ನನ್ನ ಕ್ಷೇತ್ರದಲ್ಲಿ ಏನು ನಡೆಯುತ್ತಿದೆ ಎಂಬು ನನಗೆ ಗೊತ್ತಿರುತ್ತದೆ. ರಾಮನಗರದ ತಹಸೀಲ್ದಾರ್, ಎಸಿ ಯಾವ ರೀತಿ ಬಂದಿದ್ದಾರೆಂಬುದನ್ನು ಬೀದಿಯಲ್ಲಿ ಜನರು ಮಾತನಾಡುತ್ತಾರೆ. ಸಾಕ್ಷಿ ಹಿಡಿದುಕೊಂಡು ಬನ್ನಿ ಎಂದರೆ ನಾನು ಎಲ್ಲಿ ಹಿಡಿದುಕೊಂಡು ಬರಲಿ? ಆದುದರಿಂದ ಈ ಸಬ್ಜೆಕ್ಟ್ ಬಗ್ಗೆ ಚರ್ಚೆ ಬೇಡ.

ಅಧ್ಯಕ್ಷರು :- ಕುಮಾರಸ್ವಾಮಿಯವರೆ, ನಾನು ಅದನ್ನೇ ಹೇಳುತ್ತಿದ್ದೇನೆ, ಇಲ್ಲಿ ಪ್ರತಿ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಈ ಅಪಾದನೆ ಮಾಡುವುದು ನಡೆದೇ ಇದೆ, ಹಾಗೆಂದೆ ಈ ಸದನದಲ್ಲಿ ಪದೆ ಪದೆ ಅದನ್ನೆ ಚರ್ಚೆ ಮಾಡೋಣವೇ? ಈ ರೀತಿ ಚರ್ಚೆ ಮಾಡುವುದರ ಮೂಲಕ ನಾವು ಎಲ್ಲಾ ಜನಪ್ರತಿನಿಧಿಗಳು ನಮ್ಮ ಗೌರವವನ್ನು ನಾವೇ ಕಳೆದುಕೊಳ್ಳುತ್ತಿದ್ದೇವೆ. ದಯವಿಟ್ಟು, ಈ ಸದನದಲ್ಲಿ ಚರ್ಚೆ ಮಾಡುವ ಬದಲು ಎಲ್ಲರೂ ವಿಚಾರ ಮಾಡಿ, ಪರ್ಸೆಂಟೇಜ್ ಬಗ್ಗೆ ಹೇಳಿದಿರಿ, ಇದಕ್ಕೆ ಕಡಿವಾಣ ಹಾಕಲು ಎಲ್ಲಾ ಜನಪ್ರತಿನಿಧಿಗಳು ಪ್ರಯತ್ನ ಮಾಡುತ್ತೀರಾ? ಎಲ್ಲೆಲ್ಲಿ ಯಾವ್ಯಾವ ಡಿಪಾರ್ಟ್‌ಮೆಂಟ್‌ನಲ್ಲಿ ಎಷ್ಟೆಷ್ಟು ಪರ್ಸೆಂಟೇಜ್ ಎಂಬುದನ್ನು ಹೇಳುವಾಗ, ನಮ್ಮ ಶಾಸಕರು ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡುತ್ತೀರಾ? ಎಲ್ಲರೂ ಕೂಡಿ ಒಂದು ನಿರ್ಧಾರವನ್ನು ತೆಗೆದುಕೊಳ್ಳಿ, ನಾವು ಯಾವುದೆ ಒಂದು ಪೈಸೆ ಪರ್ಸೆಂಟೇಜ್ ಇಲ್ಲದೆ ಮಾಡೋಣ ಎಂದು. ಮಾಡುತ್ತೀರಾ? ಸದನದಲ್ಲಿ ಎಲ್ಲರೂ ಮಾತನಾಡುವುದು ಅಷ್ಟೆ, ಇದಕ್ಕೆ ಯಾರು ತಯಾರಿದ್ದಾರೆ?

ಶ್ರೀ ಆರ್. ಧ್ರುವನಾರಾಯಣ್ :- ಅಧ್ಯಕ್ಷರೆ, ನೀವು ಡಿಸ್ಪಾರಿಟಿಸ್ ಅನ್ನು ಕೇಳಿ.

ಅಧ್ಯಕ್ಷರು :- ಅವರು ಉತ್ತರ ಕೊಡಲಿ.

ಶ್ರೀ ಶೋಭಾ ಕರಂದ್ಲಾಜೆ :- ಈಗಾಗಲೆ ನಾನು 18-8-2008ರ ಕಾಮಗಾರಿ 114ಕ್ಕೆ ಮಂಜೂರಾತಿಯಾಗಿ ಮತ್ತು ಚುನಾವಣೆಗೆ ಸ್ವಲ್ಪ ದಿವಸ ಮೊದಲು 22-9-2008ರಲ್ಲಿ ಇನ್ನೊಂದು ಪರಿಷ್ಕೃತ ಪಟ್ಟಿಯನ್ನು ಕಳುಹಿಸಿಕೊಡಲಾಗಿದೆ, ಅದಕ್ಕಾಗಿ ಈ ಕಾಮಗಾರಿ ತಡವಾಗಿದೆ ಎಂದು ಹೇಳಲಾಗಿದೆ. ಮಾನ್ಯ ಕೃಷ್ಣಪ್ಪನವರು ನನ್ನ ಇಲಾಖೆಯ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಯ ಬಗ್ಗೆ ಮಾತನಾಡಿದರು. ಲೋಕೋಪಯೋಗಿ ಇಲಾಖೆಯ ಸಚಿವರು ಇಲ್ಲಿ ಇಲ್ಲ. ದಯಮಾಡಿ ನನ್ನ ಇಲಾಖೆಯ ಬಗ್ಗೆ ಮಾತನಾಡಿದ್ದರೆ ಇಷ್ಟು ಗೊಂದಲವಾಗುತ್ತಿರಲಿಲ್ಲವೆಂದು ತಿಳಿದುಕೊಂಡಿದ್ದೇನೆ. ಮದ್ದೂರಿನ ಟೆಂಡರ್ ಅನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳ ಕಚೇರಿಯಿಂದ ಹೊರಡಿಸಲಾಗಿದೆ. ಇದಕ್ಕೆ ಮುಖ್ಯವಾದ ಕಾರಣ, ಮದ್ದೂರು ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಯ ಎಲ್ಲಾ ಪ್ರಮುಖರು ಸೇರಿ ಆ ತಾಲ್ಲೂಕಿಗೆ ಕೊಟ್ಟಂಥ ಹಣದಲ್ಲಿ ತುಂಡು ಗುತ್ತಿಗೆಯನ್ನು ಕೊಟ್ಟು ಇದರಲ್ಲಿ ಕಳಪೆ ಕಾಮಗಾರಿ ಅಥವಾ ಬೇರೆ ಬೇರೆ ಕಾಮಗಾರಿಗಳನ್ನು ತಮಗೆ ಇಷ್ಟ ಬಂದವರಿಗೆ ಕೊಟ್ಟು ಸ್ವಜನ ಪಕ್ಷಪಾತ ಮಾಡುತ್ತಿದ್ದಾರೆ ಎನ್ನುವ ದೂರನ್ನು ಸುಮಾರು 500 ಜನರು ಸಹಿ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಮದ್ದೂರಿನವರು ಕೊಟ್ಟಂತ ದೂರಿನ ಪ್ರತಿಯನ್ನು ಓದುತ್ತೇನೆ, ಸಭಾಧ್ಯಕ್ಷರೆ, ತಮಗೆ ನಾನು ಕಳುಹಿಸಿಕೊಡುತ್ತಿದ್ದೇನೆ.' "ಮಂಡ್ಯ ಜಿಲ್ಲೆಯ ಮದ್ದೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಗೃಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಬಿಡುಗಡೆ ಮಾಡಿರುವ 7 ಕೋಟಿ ರೂಪಾಯಿಗಳ ಅನುದಾನದಲ್ಲಿ ನಡೆಸುತ್ತಿರುವ ಅವ್ಯವಹಾರದ ಬಗ್ಗೆ. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಗಮನಕ್ಕೆ ಈ ಕೆಳಗೆ ಸಹಿ ಮಾಡಿರುವ ಮದ್ದೂರು ವಿಧಾನಸಭಾ ಕ್ಷೇತ್ರದ ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರು ತರಬಯಸುವುದೇನೆಂದರೆ, ತಾವು ಮದ್ದೂರು ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ವಿಶೇಷ ಅನುದಾನವಾಗಿ 7 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆಂದು ತಿಳಿದು ಬಂದಿದೆ. ಮೇಲ್ಕಂಡ ವಿಶೇಷ ಅನುದಾನವನ್ನು ಕ್ಷೇತ್ರದ ಅಭಿವೃದ್ಧಿಯು ದೃಷ್ಟಿಯಿಂದ ಸದುಪಯೋಗ ಮಾಡಿಕೊಳ್ಳದೆ ಕೆಲವು ರಾಜಕಾರಣಿಗಳು ಸ್ವಾರ್ಥಸಾಧನೆಗೋಸ್ಕರ ಜಿಲ್ಲಾ ಪಂಚಾಯತಿಯು ಎಂಜಿನಿಯರ್‌ಗಳನ್ನು ಉಪಯೋಗಿಸಿಕೊಂಡು ಗುತ್ತಿಗೆ ಹಣದ ಮೇಲೆ ಈಗಾಗಲೇ 10% ಹಣವನ್ನು ಕಮಿಷನ್ ರೂಪದಲ್ಲಿ ಗುತ್ತಿಗೆದಾರರಿಂದ ಪಡೆದುಕೊಂಡು ತುಂಡು ಗುತ್ತಿಗೆಯ ಆಧಾರದ ಮೇಲೆ ತಮಗೆ ಇಷ್ಟ ಬಂದವರಿಗೆ ಗುತ್ತಿಗೆ ಒಪ್ಪಂದ ಮಾಡಿಕೊಂಡಿರುವುದಾಗಿ ತಿಳಿದು ಬಂದಿರುತ್ತದೆ. ಈ ಕಾರಣಕ್ಕಾಗಿ ತುಂಡು

ಗುತ್ತಿಗೆಯನ್ನು ಕೊಡಬಾರದು, ಟೆಂಡರ್ ಮೂಲಕವೆ ಈ ಗುತ್ತಿಗೆಯನ್ನು ಕೊಡಬೇಕು" ಎಂಬುದನ್ನು ಮಾನ್ಯ ಎಲ್ಲಾ ಜನಪ್ರತಿನಿಧಿಗಳು ಆ ಭಾಗದವರು ವಿನಂತಿಯನ್ನು ಮಾಡಿದ್ದಾರೆ. ದೂರು ಬಂದ ಕಾರಣಕ್ಕಾಗಿ ಮುಖ್ಯಮಂತ್ರಿಗಳ ಕಚೇರಿಯಿಂದ, ಸಾರ್ವಜನಿಕರಿಂದ ದೂರು ಬಂದಿರುವ ಹಿನ್ನೆಲೆಯಲ್ಲಿ ಕಾಮಗಾರಿಗಳನ್ನು ಸದ್ಯಕ್ಕೆ ತಡೆಹಿಡಿಯಬೇಕು, ಟೆಂಡರ್ ಮೂಲಕವೇ ಕಾಮಗಾರಿಗಳನ್ನು ಮಾಡಬೇಕೆಂಬುವ ಮಾತನ್ನು ಮುಖ್ಯಮಂತ್ರಿಗಳ ಕಚೇರಿಯಿಂದ ಹೇಳಿದ್ದಾರೆ. ಆ ಕಾರಣಕ್ಕಾಗಿ ಇವತ್ತು ನಾನು ಮಾನ್ಯ ಎಲ್ಲಾ ಸದಸ್ಯರಲ್ಲಿ ವಿನಂತಿಯನ್ನು ಮಾಡುತ್ತೇನೆ, ನಾನು ಈಗಾಗಲೆ ನಮ್ಮ ಇಲಾಖೆಯಿಂದ ಜಿಲ್ಲಾ ಪಂಚಾಯತಿಗೆ ಕೊಡುವಂಥ ಹಣವನ್ನು ತುಂಡು ಗುತ್ತಿಗೆಯ ಆಧಾರದ ಮೇಲೆ ಕೊಡುವ ಪರಿಪಾಠವಿತ್ತು. ಆ ಕಾರಣಕ್ಕಾಗಿ ಅಧಿಕಾರವನ್ನು ವಹಿಸಿಕೊಂಡ ಕೆಲವೆ ದಿವಸಗಳಲ್ಲಿ ಈ ತುಂಡು ಗುತ್ತಿಗೆಯನ್ನು ಕೊಡಬಾರದು, ಟೆಂಡರ್ ಪ್ರಕ್ರಿಯೆಯ ಮೂಲಕವೇ ನನ್ನ ಇಲಾಖೆಯಿಂದ ಬಿಡುಗಡೆಯಾಗುವಂಥ ಹಣವನ್ನು ಉಪಯೋಗಿಸಿಕೊಂಡು ಕೆಲಸವನ್ನು ಮಾಡಬೇಕೆಂದು ಆದೇಶವನ್ನು ನಾನು ಕೊಟ್ಟಿದ್ದೇನೆ. ಇವತ್ತು ನಿಮಗೆಲ್ಲರಿಗೂ ಗೊತ್ತಿದೆ, ಜಿಲ್ಲಾ ಪಂಚಾಯತಿಗೆ ಹೋಗುತ್ತಿರುವ ಹಣವನ್ನು ಟೆಂಡರ್ ಮೂಲಕವೆ ಕಾಮಗಾರಿ ಕೆಲಸಕ್ಕೆ ಬಳಸಬೇಕೆಂದು ಸೂಚನೆಯನ್ನು ಕೊಟ್ಟಿದ್ದೇನೆ. ಈ ಕೆಲಸಕ್ಕು ಕೂಡ ಅನ್ಯಾಯವಾಗಬಾರದು ಎಂಬುದು ನಮ್ಮ ಭಾವನೆ, ಆ ಕಾರಣಕ್ಕಾಗಿ ಕೆಲಸ ತಡವಾಗಿದೆ, ಈ ಹಣವನ್ನು ತಡೆಹಿಡಿಯುವಂಥ ಯಾವುದೆ ಪ್ರಶ್ನೆ ಇಲ್ಲ, ಟೆಂಡರ್ ಮೂಲಕ ಕಾಮಗಾರಿಯನ್ನು ಮಾಡಬೇಕೆಂಬುದು ಸರ್ಕಾರದ ಇಚ್ಛೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾರ್ಚಿಯೊಳಗೆ ಕೆಲಸ ಮುಗಿಯಬೆಕು, ಯಾವಾಗ ಟೆಂಡರ್ ಕರೆಯುತ್ತಾರೆ? ಈಗ ಸ್ವಜನ ಪಕ್ಷಪಾತವೆಂದು ಹೇಳಿದರು, ಸ್ವಜನ ಪಕ್ಷಪಾತವನ್ನು ಯಾರು ಮಾಡಿದರು? ಅದನ್ನು ಅವರು ಹೇಳಬೇಕಲ್ಲಾ? ಅವರಿಗೆ ಏನು ಶಿಕ್ಷೆ ಕೊಟ್ಟಿದ್ದಾರೆಂದು ಹೇಳಬೇಕಲ್ಲಾ?

ಶ್ರೀ ಯು.ಟಿ. ಖಾದರ್ :- ಆ ಅವ್ಯವಹಾರ ಮಾಡಿದ ಅಧಿಕಾರಿಯ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು.

ಡಾ॥ ಬಿ.ಎಸ್.ಯಡಿಯೂರಪ್ಪ [ಮುಖ್ಯಮಂತ್ರಿಗಳು] :- ಈ ಮನೆಯಲ್ಲಿ ಏನು ಚರ್ಚೆಯಾಗುತ್ತಿದೆ ಎಂಬುದು ಗೊತ್ತಾಗುತ್ತಿಲ್ಲ. ಸಚಿವರು ಏನು ಹೇಳಿದರು? ಎಲ್ಲೂ ನಾವು ತುಂಡು ಗುತ್ತಿಗೆ ಮಾಡುವುದಕ್ಕೆ ನಾವು ಬಿಡುವುದಿಲ್ಲ, ಟೆಂಡರ್ ಕರೆದು

ಮಾಡುವುದಕ್ಕೆ ನಾವು ಅವಕಾಶ ಮಾಡಿಕೊಡುತ್ತೇವೆ, ಕೊಟ್ಟಿರುವ ಕೆಲಸ ರದ್ದು ಮಾಡುವ ಪ್ರಶ್ನೆ ಇಲ್ಲವೆಂದು ಹೇಳಿದರು, ಇಲ್ಲಿ ಏನು ಉಪಪ್ರಶ್ನೆ ಬರುತ್ತದೆ ಸ್ವಾಮಿ? ಎಲ್ಲರು ಏತಕ್ಕೆ ಎದ್ದೇಳುತ್ತೀರಾ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಇವತ್ತು 8 ವಿಧಾನ ಸಭೆಗಳಲ್ಲಿ ಚುನಾವಣೆಯಾದ ಸಮಯದಲ್ಲಿ ನೀವೇ ಎಲ್ಲಾ ಕಡೆ 30 ಕೋಟಿ 40 ಕೋಟಿ ಉಪಯೋಗಿಸಿ ನಿಮ್ಮ ಅಭಿವೃದ್ಧಿಯನ್ನು ನಿಮ್ಮ ಕ್ಷೇತ್ರಕ್ಕೆ ಮಾದರಿ ಕ್ಷೇತ್ರವನ್ನಾಗಿ ಮಾಡುತ್ತೇವೆಂದು ಹೇಳಿರುವ ಕಟಿಂಗ್ಸ್ ಎಲ್ಲಾ ಇಲ್ಲಿದೆ. ಈಗ ಚುನಾವಣೆಗಿಂತ ಮುಂಚೆ ನಿಮ್ಮ ಕಚೇರಿಯಿಂದಲೇ ಇಂತಿಂಥ ಕೆಲಸಗಳನ್ನು ತೆಗೆದುಕೊಳ್ಳಿ ಎಂದು ಆದೇಶ ಮಾಡಿ ಜಿಲ್ಲಾಪಂಚಾಯಿತಿಗೆ ಡೈರೆಕ್ಷನ್ ಕೊಟ್ಟಿದ್ದೀರಿ? ಪುಟ್ಟಯ್ಯನ ಮನೆಯಿಂದ ಕೃಷ್ಣಯ್ಯನ ಮನೆಯ ರಸ್ತೆಯವರೆಗೆ 50 ಸಾವಿರ, 25 ಸಾವಿರ ರೂಪಾಯಿಗಳ ಇಂಥ ಕಾಮಗಾರಿಯನ್ನು ಮಾಡಿ ಎಂದು ನೀವೇ, ನಿಮ್ಮ ಸರ್ಕಾರವೇ ಡೈರೆಕ್ಷನ್ ಕಳುಹಿಸಿದ್ದೀರಿ. ಅವತ್ತು ಇದು ಸ್ವಜನ ಪಕ್ಷಪಾತವಾಗುತ್ತದೆ, ಪೀಸ್ ವರ್ಕ್ ಕೊಡಬಾರದೆಂದು ಚುನಾವಣೆಗೆ ಮುಂಚೆ ಅದು ಅಧಿಕಾರಿಗಳ ಅಥವಾ ಮಂತ್ರಿಗಳ ಗಮನಕ್ಕೆ ಬರಲಿಲ್ಲವೇ? ಚುನಾವಣೆಗೆ ಮುಂಚೆ ಕೊಟ್ಟಿರಿ, ಈಗ ಮೂರು ಕ್ಷೇತ್ರದಲ್ಲಿ ಮಾತ್ರ ಕೆಲಸ ನಿಲ್ಲಿಸಿ ಎಂದು ಡೈರೆಕ್ಷನ್ ಕೊಟ್ಟಿದ್ದೀರಿ, ಆದರೆ ಇನ್ನುಳಿದ 5 ಕ್ಷೇತ್ರದಲ್ಲಿ ಏನು ಮಾಡಿದ್ದೀರಿ? ಈ ಬಗ್ಗೆ ಸಣ್ಣತನದಲ್ಲಿ ವರ್ತಿಸಬೇಡಿ ಎಂದು ಹೇಳುತ್ತಿದ್ದೇನೆ.

ಡಾ|| ಬಿ.ಎಸ್. ಯಡಿಯೂರಪ್ಪ :- ಕುಮಾರಸ್ವಾಮಿಯವರಿಗೆ ನಾನು ಇಷ್ಟನ್ನು ಹೇಳಲು ಇಷ್ಟಪಡುತ್ತೇನೆ, 8 ವಿಧಾನಸಭಾ ಕ್ಷೇತ್ರಕ್ಕೆ ವಿಶೇಷ ಆದ್ಯತೆಯನ್ನು ಕೊಟ್ಟು ನಾವೇನು ಹಣವನ್ನು ಮಂಜೂರು ಮಾಡಿದ್ದೇವೆ, ಅಷ್ಟು ಕ್ಷೇತ್ರಗಳಲ್ಲಿ ಮಂಜೂರಾಗಿರುವ ಹಣವನ್ನು ಬಳಸಿಕೊಂಡು ಕಾನೂನಿನ ಚೌಕಟ್ಟಿನಲ್ಲಿ ಕಾಮಗಾರಿ ಕೆಲಸವನ್ನು ಮಾಡಿಸುತ್ತೇವೆ, ಯಾವುದೇ ಕೆಲಸದ ಹಣವನ್ನು ಆ 8 ಕ್ಷೇತ್ರಗಳಲ್ಲಿ ವಾಪಸ್ ತೆಗೆದುಕೊಳ್ಳುವ ಪ್ರಶ್ನೆ ಬರುವುದಿಲ್ಲ, ಟೆಂಡರ್ ಕರೆದು ಕಾಮಗಾರಿಯನ್ನು ಮಾಡುತ್ತೇವೆ, ಅದನ್ನೆ ಸಚಿವರು ಹೇಳಿದ್ದು, ಟೆಂಡರ್ ಕರೆದು ಕಾಮಗಾರಿಯನ್ನು ತೆಗೆದುಕೊಳ್ಳುತ್ತೇವೆ.